# ಟಿಕ್ ಟಿಕ್ ಟಿಕ್... 'ವಿಂಡೋಸ್ 11'

'ವಿಂಡೋಸ್ 10' ಹಳೆಯದಾಯಿತು ಎನ್ನುವ ಭಾವನೆ ಬಳಕೆದಾರರಲ್ಲಿ ಮೂಡುತ್ತಿರುವಾಗಲೇ, ಇದೋ ಹೊಸತು ಎಂದು 'ವಿಂಡೋಸ್ 11'ರ ಆಗಮನದ ಸುದ್ದಿಯನ್ನು ಮೈಕ್ರೊಸಾಫ್ಟ್ ನೀಡಿದೆ.

■ **ಶಶಿಕುಮಾರ್ ಸಿ.**




ಮೈಕ್ರೊಸಾಫ್ಟ್‌ನ ವಿಂಡೋಸ್ ಸರಣಿಯ ಕಂಪ್ಯೂಟರ್ ಕಾರ್ಯಾಚರಣಾ ವ್ಯವಸ್ಥೆಯಾದ (ಆಪರೇಟಿಂಗ್ ಸಿಸ್ಟಂ ಓಎಸ್) 'ವಿಂಡೋಸ್ 11' ಅಕ್ಟೋಬರ್ ತಿಂಗಳಲ್ಲಿ ಬಳಕೆದಾರರಿಗೆ ಲಭ್ಯವಾಗುವ ಸಾಧ್ಯತೆಯಿದೆ. ಇದು ಸಾಧ್ಯವಾದರೆ ಮೈಕ್ರೊಸಾಫ್ಟ್ ಕಂಪನಿಯು ಆರು ವರ್ಷಗಳ ಬಳಿಕ ತನ್ನ ಹೊಸ 'ಓಎಸ್' ಅನ್ನು ಗ್ರಾಹಕರಿಗೆ ಕೊಡುಗೆಯಾಗಿ ನೀಡಿದಂತಾಗುತ್ತದೆ.

ಹೊಸ ಓಎಸ್ 'ವಿಂಡೋಸ್ 11' ಹತ್ತು ಹಲವು ಆಕರ್ಷಕ ಆಯ್ಕೆಗಳನ್ನು ಒಳಗೊಂಡಿದೆ. ಅದರ ಇನ್‌ಸೈಡರ್ ಡೆವಲಪರ್ ಬೀಟಾ ಆವೃತ್ತಿಯು ನಿರ್ದಿಷ್ಟ ಬಳಕೆದಾರರಿಗೆ ಈಗಾಗಲೇ ಲಭ್ಯವಾಗುತ್ತಿದೆ. ಆದರೆ ಎಲ್ಲ ಜನಸಾಮಾನ್ಯರಿಗೆ ಪೂರ್ಣ ಪ್ರಮಾಣದ ಬಳಕೆಗೆ ಈ ವರ್ಷದ ಕೊನೆಯವರೆಗೂ ಕಾಯಲೇಬೇಕಿದೆ ಎಂದು ಮೈಕ್ರೋಸಾಫ್ಟ್ ಹೇಳಿದೆ.

ಇತ್ತೀಚೆಗೆ ಮೈಕ್ರೋಸಾಫ್ಟ್ ಎರಡು ಪೋಸ್ಟರ್‌ಗಳನ್ನು ಹಂಚಿಕೊಂಡಿತ್ತು. ಅದರ ಪ್ರಕಾರ, ಅಕ್ಟೋಬರ್ 20ರಂದು 'ವಿಂಡೋಸ್ 11' ಬಳಕೆಗೆ ದೊರೆಯುವ ನಿರೀಕ್ಷೆಯಿದೆ.

ಉನ್ನತೀಕರಿಸಿದ ಆಪರೇಟಿಂಗ್ ಸಿಸ್ಟಮ್ ಇದಾಗಿದ್ದು, ವಾಣಿಜ್ಯ ಬಳಕೆದಾರರು, ವೃತ್ತಿಪರ ಬಳಕೆದಾರರು ಹಾಗೂ ಮಲ್ಟಿಪಲ್ ಮಾನಿಟರ್ ಬಳಕೆ ಮಾಡುವವರಿಗೆ ಹೆಚ್ಚು ಸಹಕಾರಿ ಆಗುವಂತೆ ಇದನ್ನು ಅಭಿವೃದ್ಧಿ ಪಡಿಸಲಾಗಿದೆ.

ಈಗಾಗಲೇ 'ವಿಂಡೋಸ್ 10' ಬಳಕೆ ಮಾಡುತ್ತಿರುವವರಿಗೆ ಉನ್ನತೀಕರಿಸಿದ ಓಎಸ್ ಅನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶವನ್ನು ಕಂಪನಿಯು ಒದಗಿಸಿದೆ. ಜೊತೆಗೆ 'ವಿಂಡೋಸ್ 11'ರಲ್ಲಿ ಹೊಸ ಆ್ಯಪ್ ಸ್ಟೋರ್, ಆ್ಯಂಡ್ರಾಯ್ಡ್ ಆ್ಯಪ್‌ಗಳು, ಅತ್ಯುತ್ತಮ ಗ್ರಾಫಿಕ್ಸ್ ಇರುವ ಸಾವಿರಕ್ಕೂ ಹೆಚ್ಚು ಗೇಮ್‌ಗಳು, ಆಟೊ ಎಚ್‌ಡಿಆರ್ ಇರಲಿವೆ ಎಂದು ಮೈಕ್ರೋಸಾಫ್ಟ್ ತಿಳಿಸಿದೆ.

'ವಿಂಡೋಸ್ 11' ಅತ್ಯಂತ ಸುರಕ್ಷಿತ ಓಎಸ್ ಆಗಿದೆ. ಲ್ಯಾಪ್‌ಟಾಪ್‌ನ ಬ್ಯಾಟರಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲಿದೆ. 'ಮ್ಯಾಕ್' ಸೇರಿದಂತೆ ಇತರ ಸಿಸ್ಟಮ್ ಬಳಕೆ ಮಾಡುತ್ತಿರುವ ಯಾರಿಗೆ ಬೇಕಿದ್ದರೂ ವಿಡಿಯೊ ಕರೆ ಮಾಡಬಹುದು ಎಂದು ಮೈಕ್ರೊಸಾಫ್ಟ್ ಹೇಳಿಕೊಂಡಿದೆ. ■

## ವಾಟ್ಸ್‌ಆ್ಯಪ್: ಪೋಟೊ ಡಿಸ್‌ಅಪಿಯರ್!




ವಾಟ್ಸ್‌ಆ್ಯಪ್ ತನ್ನ ಬೀಟಾ ಬಳಕೆದಾರರಿಗೆ 'ಡಿಸ್‌ಅಪಿಯರಿಂಗ್ ಫೋಟೋಸ್' ಹೆಸರಿನ ಫೀಚರ್ಸ್ ಅನ್ನು ಪರಿಚಯಿಸಿದ್ದು, ಇದಕ್ಕೆ 'ವ್ಯೂ ಒನ್ಸ್' ಎಂದು ಹೆಸರಿಟ್ಟಿದೆ. ಇದು ಇನ್‌ಸ್ಟಾಗ್ರಾಮ್‌ನ ಎಕ್ಸ್‌ಪೈರಿಂಗ್ ಮೀಡಿಯಾ ಫೀಚರ್ಸ್ ಮಾದರಿಯಲ್ಲೇ ಕಾರ್ಯನಿರ್ವಹಿಸಲಿದೆ.

ಈ ಫೀಚರ್ಸ್ ವಿಶೇಷತೆ ಅಂದರೆ, ನೀವು ಕಳುಹಿಸುವ ಫೋಟೊವನ್ನು ಮತ್ತೊಬ್ಬರು ರಿಸೀವ್ ಮಾಡಿ ಆ ಚಾಟ್‌ನಿಂದ ಹೊರಬಂದ ಕೂಡಲೇ ಫೋಟೊ ಚಾಟ್‌ನಿಂದ ಕಣ್ಮರೆಯಾಗುತ್ತದೆ. ಈ ಫೀಚರ್ಸ್ ಅನ್ನು ನೀವು ಗ್ರೂಪ್‌ಗಳಲ್ಲೂ ಬಳಸಬಹುದು. ರೀಡಿಂಗ್ ರೆಸಿಪ್ಟ್‌ಗಳನ್ನು ನಿಷ್ಕ್ರಿಯಗೊಳಿಸಿದರೂ ಡಿಸ್‌ಅಪಿಯರಿಂಗ್ ಫೋಟೊಗಳನ್ನು ತೆರೆಯಬಹುದಾಗಿದೆ. ಯಾವುದೇ ಮೀಡಿಯಾ ಫೋಟೊವನ್ನು ಶೇರ್ ಮಾಡುವಾಗ ವ್ಯೂ ಒನ್ಸ್ ಬಟನ್ ನಿಮಗೆ ಗೋಚರಿಸದಿದ್ದರೆ, ನೀವು ಈ ಫೀಚರ್ಸ್ ಅನ್ನು ಸ್ವೀಕರಿಸಿಲ್ಲ ಎಂದರ್ಥ. ಈ ವಿಶೇಷತೆಶಯನ್ನು ವಾಟ್ಸ್‌ಆ್ಯಪ್‌ನ 2.21.14.3 ಆ್ಯಂಡ್ರಾಯ್ಡ್ ಆವೃತ್ತಿಯಲ್ಲಿ ಕಾಣಬಹುದು.

ಗ್ಯಾಲರಿಯಿಂದ ಫೋಟೊಗಳನ್ನು ಆಯ್ಕೆ ಮಾಡುವ ಮೂಲಕ ಬಳಕೆದಾರರು ಡಿಸ್‌ಅಪಿಯರಿಂಗ್ ಫೋಟೊಗಳನ್ನು ಕಳುಹಿಸಲು ಸಾಧ್ಯ. ಬಳಕೆದಾರರು ಫೋಟೊ ಆಯ್ಕೆ ಮಾಡಿದ ನಂತರ, 'ಶೀರ್ಷಿಕೆ ಸೇರಿಸಿ' ಎಂಬ ಮತ್ತೊಂದು ಬಾರ್ ಕಾಣಿಸಿಕೊಳ್ಳುತ್ತದೆ. ಅದನ್ನು ಟ್ಯಾಪ್ ಮಾಡಿ ಸ್ನೇಹಿತರು ಮತ್ತು ಕುಟುಂಬ ಸದಸ್ಯರಿಗೆ ಕಳುಹಿಸಬಹುದು. ವಿಡಿಯೊಗಳು ಮತ್ತು ಜಿಐಎಫ್‌ಗಳಿಗೂ ಈ ಫೀಚರ್ಸ್ ಸ್ಪಂದಿಸುತ್ತದೆ.

ಸ್ಕ್ರೀನ್‌ಶಾಟ್ ಅಥವಾ ಸ್ಕ್ರೀನ್ ರೆಕಾರ್ಡಿಂಗ್ ಫೀಚರ್ಸ್‌ಗಳನ್ನು ಬಳಸಿಕೊಂಡು ಡಿಸ್‌ಅಪಿಯರಿಂಗ್ ಫೀಚರ್ಸ್ ಬಳಸಿಕೊಂಡು ಕಳುಹಿಸಿದ ಫೋಟೊ ಅಥವಾ ವೀಡಿಯೊವನ್ನು ಬಳಕೆದಾರರು ತಮ್ಮ ಫೋನ್‌ನಲ್ಲೇ ಉಳಿಸಿಕೊಳ್ಳಬಹುದು. ಬೀಟಾ ಆವೃತ್ತಿಯ ಬಳಕೆದಾರರಿಗೆ ಮಾತ್ರ ಈ ಫೀಚರ್ಸ್ ಸದ್ಯಕ್ಕೆ ಲಭ್ಯ. ಇನ್ನು ಕೆಲವೇ ದಿನಗಳಲ್ಲಿ ಇದು ಎಲ್ಲ ವಾಟ್ಸ್‌ಆ್ಯಪ್ ಬಳಕೆದಾರರಿಗೆ ಲಭ್ಯವಾಗಲಿದೆ. ■